

# ಮುತ್ತವನ ಚಿತ್ತಾರವ್ಯೂ









ಸಮುದ್ರದ ದಡದಲ್ಲಿ ಮೀಯುವ ಮನಸ್ಸುಗಳಿಗೆ ಕೇವಲ ಸಮುದ್ರದ ಉಪ್ಪು ನೀರು, ಅಲೆಗಳು, ಅಲೆಗಳ ಆರ್ಭಟ, ಅಲೆಗಳಿಂದ ಸೃಷ್ಟಿಯಾದ ನೊರೆ, ದಂಡೆಯಲ್ಲಿನ ಮರಳು ರಾಶಿ, ಸೂರ್ಯೋದಯ, ಸೂರ್ಯಾಸ್ತ, ಮೀನುಗಾರರ ದೋಣಿಗಳು, ಬೃಹತ್ ಹಡಗುಗಳು, ದೂರದಲ್ಲೆಲ್ಲೋ ಕಾಣುವ ದ್ವೀಪಗಳು ಮಾತ್ರ ಕಣ್ಣೋಟಕ್ಕೆ ಕಾಣುತ್ತವೆ. ಆದರೆ ಅಲೆಗಳಿಂದ ಕ್ಷಣ ಕ್ಷಣಕ್ಕೂ ಸೃಷ್ಟಿಯಾಗುವ ಚಿತ್ತಾಕರ್ಷಕ ವಿನ್ಯಾಸಗಳು, ಸಮುದ್ರದ ಜೀವಜಂತುಗಳು ದೇವರು ರುಜು ಮಾಡಿದಂತೆ ಸೃಷ್ಟಿಸುವ ವಿನ್ಯಾಸಗಳು, ಅರೆಕ್ಷಣ ಮೂಡಿ ಮತ್ತೆ ಕ್ಷಣದಲ್ಲೇ ಅಳಿಸಿಹೋಗುವ ಕಲಾ ಸೃಷ್ಟಿಯನ್ನು ನಾವ್ಯಾರೂ ಗಮನಿಸುವುದೇ ಇಲ್ಲ!

ಕಡಲತೀರವೆಂದರೆ ಕೇವಲ ಉಪ್ಪುನೀರಿನ ಅಲೆಗಳು, ಭೋರ್ಗರೆತ ಮಾತ್ರವಲ್ಲ, ನಮ್ಮ ಕಣ್ಣು ಮತ್ತು ಮನಸ್ಸನ್ನು ಅರಳಿಸಿ ನೋಡಿದಾಗ ನಿರ್ಲಕ್ಷಿತ ಕಲಾಕೃತಿಗಳು ಒಬ್ಬೊಬ್ಬರಿಗೆ ಒಂದೊಂದು ರೀತಿ ದರ್ಶನವಾಗುತ್ತದೆ. ಈ ದೈವಿಕ ದರ್ಶನ ಎಂಬುದನ್ನು ನಮ್ಮೊಳಗೆ ನಾವು ಮಾಡಿಕೊಳ್ಳಬೇಕಾಗುತ್ತದೆ, ಒಂದು ಕಾವ್ಯ ಓದಿದಂತೆ.

ಆಗ... ಆಗ ಮಾತ್ರ ನಿಸರ್ಗದ ಚೆಲುವು ನಮ್ಮೊಳಗೆ ಇಳಿಯುತ್ತದೆ. ನನ್ನೊಳಗೆ ಇಳಿದ ಕಡಲ ತಡಿಯ ನಿಸರ್ಗದ ಈ ಚಿತ್ರಗಳು ನಿಮ್ಮೆದೆಯೊಳಗೂ ಇಳಿದಾಗ ಈ ಚಿತ್ರಪುಟ ನಿಮ್ಮದಾಗುತ್ತದೆ.

ನಿಸರ್ಗ ಸೃಷ್ಟಿಯ ಕಲಾತ್ಮಕ ಸೊಬಗು ಮನದೊಳಗೆ ಗೂಡು ಕಟ್ಟಿದಾಗ ಪರಿಸರವೇ ದೇಗುಲವಾಗುತ್ತದೆ. ಸೂರ್ಯ, ಚಂದ್ರ, ಗಾಳಿ, ಕೆರೆ, ನದಿ, ಸಮುದ್ರ ಮುಂತಾದ ನಿಸರ್ಗವೇ ದೈವವೆಂದುಕೊಂಡು ಆದಿ ಮಾನವನ ಕಾಲದಿಂದಲೂ ನಡೆದು ಬಂದಿರುವ ಪದ್ಧತಿ, ಪರಂಪರೆ ನಮ್ಮಿಂದ ಕಣ್ಮರೆಯಾಗಿ ಮಾನವ ನಿರ್ಮಿತ ವೈಭವೋಪೇತ ಗುಡಿಯೊಳಗೆ ಸಿಲುಕಿದ್ದೇವೆ. ನಿಸರ್ಗ ಸೃಷ್ಟಿಯ ದೈವತ್ವ ಹಾಗೂ ಕಲಾತ್ಮಕ ಸೊಬಗನ್ನು ಆರಾಧಿಸೋಣ. ನಿಸರ್ಗದ ಚೆಲುವು ನಮ್ಮೀ ಮನದೊಳಗೆ ಇಳಿಯಲಿ ಎಂಬ ಕಡಲಿನಂತಹ ಆಶಯ ನಮ್ಮೆಲ್ಲರದ್ದೂ ಆಗಿರಲಿ.

ಪ್ರತಿಕ್ರಿಯಿಸಿ: feedback@sudha.co.in